ಶ್ರೀ ಎಂ. ರಘುಪತಿ (ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರು).—

ಅ) ಬಿಜಾಪುರ ಜಿಲ್ಲೆಯಲ್ಲಿ 10 ಪ್ರವಾಸಿ ಕೇಂದ್ರಗಳನ್ನು ಗುರುತಿಸಲಾಗಿದೆ. ಒಂದು ಪ್ರವಾಸಿ ಕಛೇರಿಯನ್ನು ಬಿಜಾಪುರದಲ್ಲಿ ತೆರೆಯಲಾಗಿದೆ.

ಆ) ಇಲ್ಲ.

ಶ್ರೀ ಜಿ.ಎಸ್. ಬಾಗಲಕೋಟೆ.—ಮಾನ್ಯ ಉಪಾಧ್ಯಕ್ಷರೇ, ಬಿಜಾಪುರ ಜಿಲ್ಲೆ ಎನ್ನುವುದು ಒಂದು ಪ್ರಸಿದ್ಧವಾದ ಐತಿಹಾಸಿಕವಾದ ಕೇಂದ್ರ. ಇದರಲ್ಲಿ ಜಗತ್ಪ್ರಸಿದ್ಧವಾದ ಗೋಳಗುಮ್ಮಟ ಇದೆ. ಜಗತ್ತಿನ 7 ಸ್ಥಳಗಳಲ್ಲಿ ಇದು ಒಂಮ ಮಹತ್ವವಾದ ಸ್ಥಾನವನ್ನು ಪಡೆದಿದೆ. ಅಷ್ಟೇ ಅಲ್ಲ ಇದು ಚಾಲುಕ್ಯರ ಕಾಲದ ಒಂದು ಐತಿಹಾಸಿಕವಾದ ಸ್ಥಳವೂ ಆಗಿದೆ. ಆದರೆ ದುರ್ದೈವದಿಂದ ಈ ಪ್ರವಾಸಿ ಕೇಂದ್ರದಲ್ಲಿ ಸರಿಯಾದ ವ್ಯವಸ್ಥೆ ಇಲ್ಲ. ಬಿಜಾಪುರದಲ್ಲಿ ಈ ಬಗ್ಗೆ ಒಂದು ಆಫೀಸ್ ಇದ್ದರೂ ಕೂಡ ಸರಿಯಾಗಿ ನೋಡಿಕೊಳ್ಳುವಂಥಾ ಒಂದು ವ್ಯವಸ್ಥೆ ಇಲ್ಲ. ಆದುದರಿಂದ ಮಾನ್ಯ ಸಚಿವರು ಈ ಬಗ್ಗೆ ತೀವ್ರ ಗಮನಕೊಟ್ಟು ಈ ಪ್ರವಾಸಿ ಕೇಂದ್ರವನ್ನು ಚೆನ್ನಾಗಿ ಬೆಳೆಸುವ ಹಾಗೆ ಅಲ್ಲಿಗೆ ಸಾಕಷ್ಟು ಅನುಕೂಲಗಳನ್ನು ಒದಗಿಸಿ ಕೊಡಬೇಕು ಎಂದು ಹೇಳುತ್ತೇನೆ.

ಎರಡನೆಯದಾಗಿ ಈ ಬಿಜಾಪುರ ಜಿಲ್ಲೆಗೆ ಒಂದು ವಿಮಾನ ನಿಲ್ದಾಣವನ್ನು ಕಲ್ಪಿಸುವ ಸಲುವಾಗಿ ಕೇಂದ್ರ ಸರ್ಕಾರದ ಜೊತೆಗೆ ಮಾನ್ಯ ಸಚಿವರು ಮಾತನಾಡಿ ಈ ಕಾರ್ಯಕ್ರಮವನ್ನು ಕೈಗೊಳ್ಳುವರೇ ಎಂದು ಕೇಳಬಯಸುತ್ತೇನೆ.

ಶ್ರೀ ಎಂ. ರಘುಪತಿ.—ಸ್ವಾಮಿ, ಪ್ರಪಂಚದಲ್ಲಿಯೇ ಉತ್ತಮವಾದಂಥ ಯಾತ್ರಾಸ್ಥಳ ಬಿಜಾಪುರ ಜಿಲ್ಲೆ ಆಗಿದೆ. ಆ ಜಿಲ್ಲೆಯಲ್ಲಿ ನಾನು 4 ದಿನಗಳ ಹಿಂದೆ ಪ್ರವಾಸ ಕೈಗೊಂಡಾಗ ನಾನು ಹಲವಾರು ಪ್ರದೇಶಗಳನ್ನು ನೋಡಿದೆ. ಶ್ರೀಮಾನ್ ಕಟಪಟ್ಟಿಯವರೂ ಸಹ ಇದರ ಬಗ್ಗೆ ಹೇಳಿದರು. ಇವೊತ್ತಿನ ದಿವಸ ಬಾದಾಮಿಯಲ್ಲಿ ಟೂರಿಸ್ಟ್ ಹೋಟಲ್ ಆಗಬೇಕು. 10 ಕೊಠಡಿಗಳನ್ನು ಕಟ್ಟಬೇಕು. ಅದರ ಸ್ಥಳ ಪರಿಶೀಲನೆಗೆ ಹೋಗಿದ್ದೆ. ಅಲ್ಲಿ ಇದಕ್ಕಾಗಿ 10 ಎಕರೆ ಜಮೀನನ್ನು ವಶಪಡಿಸಿಕೊಂಡಿದ್ದೇವೆ. ಅದು ಬಹಳ ಉತ್ತಮವಾದಂಥ ಸ್ಥಳ. ಅಲ್ಲಿ ಟೂರಿಸ್ಟ್ ಕಾಟೇಜಸ್ ಆಗುವುದರ ಜೊತೆಗೆ ಆ ಬಾದಾಮಿಯಲ್ಲಿ ಅಗಸ್ತೇಶ್ವರನ ಒಂದು ಕೊಳ ಇದೆ. ಅಲ್ಲಿ ಬೋಟಿಂಗ್ ಮಾಡುವಂಥಾ ಒಂದು ಕಾರ್ಯಕ್ರಮವನ್ನೂ ಸಹ ಹಾಕಿಕೊಂಡಿದ್ದೇವೆ. ಅದೇ ರೀತಿ ಬಿಜಾಪುರದಲ್ಲೂ ಸಹ ಒಂದು ಹೊಟೇಲ್ ಟೂರಿಸ್ಟ್ ಕಟ್ಟಬೇಕಾಗಿದೆ. ಇದರ ಜೊತೆಗೆ ಐಹೊಳೆ ಮತ್ತು ಮಹಾಕೂಟವನ್ನೂ ಸಹ ಒಂದು ಪ್ರವಾಸಿ ಕೇಂದ್ರವನ್ನಾಗಿ ಮಾಡುವುದಕ್ಕೆ ಮೂರು ಸ್ಥಳಗಳನ್ನು ಪರಿಶೀಲನೆ ಮಾಡಿಕೊಂಡು ಬಂದಿದ್ದೇನೆ. ನಾನು ಮೊದಲೇ ಹೇಳಿದ ಹಾಗೆ ಬಿಜಾಪುರ ಜಿಲ್ಲೆಯನ್ನು ಒಂದು ಉತ್ತಮವಾದ ಪ್ರವಾಸೀ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸುವುದಕ್ಕೆ ಸರ್ವ ಪ್ರಯತ್ನವನ್ನೂ ಮಾಡುತ್ತೇನೆಂದು ಹೇಳಬಯಸುತ್ತೇನೆ. ಇದರ ಜೊತೆಗೆ ಅಲ್ಲಿಗೆ ಎರಡು ಬಸ್ಸುಗಳನ್ನೂ ಸಹ ಹಾಕಬೇಕೆಂದಿದ್ದೇವೆ. ಇದರಲ್ಲಿ ಬೆಂಗಳೂರಿನಿಂದ ಒಂದು ಇನ್ನೊಂದು ಬಸ್ ಬಿಜಾಪುರಕ್ಕೆ ಬಂದಂಥಾ ಯಾತ್ರಾರ್ಥಿಗಳನ್ನು ಅಲ್ಲಿ ಪ್ರೇಕ್ಷಣೀಯ ಸ್ಥಳಗಳಿಗೆ ಕರೆದುಕೊಂಡು ಹೋಗುವುದಕ್ಕೆ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಈ ಕೆಲಸವನ್ನು ಆದಷ್ಟು ಶೀಘ್ರವಾಗಿ ಮಾಡುತ್ತೇನೆಂದು ಹೇಳಬಯಸುತ್ತೇನೆ.

ಇನ್ನು ಮಾನ್ಯ ಸದಸ್ಯರು ಬಿಜಾಪುರದಲ್ಲಿ ವಿಮಾನ ನಿಲ್ದಾಣದ ಬಗ್ಗೆ ಹೇಳಿದ್ದಾರೆ. ಈ ವಿಮಾನ ನಿಲ್ದಾಣದ ಬಗ್ಗೆ ಕೇಂದ್ರದ ಜೊತೆಗೆ ಸಂಪರ್ಕ ಮಾಡುತ್ತೇನೆ. ಬಿಜಾಪುರಕ್ಕೆ ಒಂದು ವಿಮಾನ ನಿಲ್ದಾಣ ಆಗಬೇಕು ಎನ್ನುವುದರ ಬಗ್ಗೆ ನಾನೂ ಒಬ್ಬ. ಈ ಬಗ್ಗೆ ಆಸಕ್ತಿ ವಹಿಸಿ ಕೆಲಸ ಮಾಡುತ್ತೇನೆಂದು ಅಷ್ಟು ಮಾತ್ರ ಹೇಳುತ್ತೇನೆ.

ವಿಷಯ : ಅರಸೀಕೆರೆಯಲ್ಲಿರುವ ಕಾರ್ಬನ್ ಕಾರ್ಖಾನೆಯಲ್ಲಿ ಸರ್ಕಾರದವರು ಬಂಡವಾಳವನ್ನು ಹೂಡಿರುವ ಬಗ್ಗೆ.

ಪ್ರ. ಸಂಖ್ಯೆ 721 (1727) ಶ್ರೀ ಜಿ. ಎಸ್. ಬಸವರಾಜು (ಅರಸೀಕೆರೆ).— ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಅರಸೀಕೆರೆಯಲ್ಲಿ 'ಕಾರ್ಬನ್' ಕಾರ್ಖಾನೆಯಲ್ಲಿ ಸರ್ಕಾರದವರು ಹೂಡಿರುವ ಬಂಡವಾಳವೆಷ್ಟು ; ಹಾಗೂ 1983ನೇ ಸಾಲಿನಲ್ಲಿ ಸದರಿ ಕಾರ್ಖಾನೆಯವರು ಗಳಿಸಿದ ಲಾಭವೆಷ್ಟು ;

ಆ) ಕಾರ್ಖಾನೆಯ ವಿವಿಧ ವಿಭಾಗಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಸಂಖ್ಯೆ ಎಷ್ಟು ; ಹಾಗೂ ಆ ಪೈಕಿ ತಾತ್ಕಾಲಿಕ ಕಾರ್ಮಿಕರ ಸಂಖ್ಯೆ ಎಷ್ಟು ;

ಇ) ಕಾರ್ಖಾನೆಯ ಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಳ್ಳುವಾಗ ನಿಯಮಗಳನ್ನು ಪಾಲಿಸಲಾಗಿದೆಯೆ ;

ಈ) ಹಾಗಿಲ್ಲದಿದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು).--

ಅ) ಅರಸೀಕೆರೆಯಲ್ಲಿ ಕಾರ್ಬನ್ ಕಾರ್ಖಾನೆ ಕರ್ನಾಟಕ ರಾಜ್ಯದ ಕೇಂದ್ರ ತೆಂಗಿನ ನಾರಿನ ಮಾರಾಟ ಸಹಕಾರ ಸಂಘ ನಿಯಮಿತ ಇದರ ಮುಖಾಂತರ ಸ್ಥಾಪಿಸಲು ಕರ್ನಾಟಕ ರಾಜ್ಯ ಸರ್ಕಾರದವರು 38,14,000 ರೂ. ಬಂಡವಾಳ ಕೊಟ್ಟಿರುತ್ತಾರೆ,

ಕಾರ್ಬನ್ ಕಾರ್ಖಾನೆ ಇನ್ನೂ ಪೂರ್ಣಗೊಂಡಿರುವುದಿಲ್ಲ. ಉತ್ಪಾದನೆ ಇನ್ನೂ ಪ್ರಾರಂಭವಾಗಿರುವುದಿಲ್ಲದ ಕಾರಣ ಲಾಭಾಂಶದ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಪರೀಕ್ಷಾರ್ಥ ಚಿಪ್ಪಿನ ಇಜ್ಜಿಲು ಉತ್ಪಾದನಾ ಸಮಯದಲ್ಲಿ ಸುಮಾರು 60 ಕಾರ್ಮಿಕರನ್ನು ತಾತ್ಕಾಲಿಕವಾಗಿ ನೇಮಿಸಿಕೊಂಡಿತು. ಆದರೆ ಈಗ ಎಲ್ಲರನ್ನು ಕೆಲಸದಿಂದ ವಜಾ ಮಾಡಲಾಗಿದೆ.

ಇ) ತಾತ್ಕಾಲಿಕ ಕೆಲಸಗಾರರನ್ನು ಸಂಘದ ಉಪಾಧ್ಯಕ್ಷರು ತಾಂತ್ರಿಕ ಸಲಹೆಗಾರರು ಮತ್ತು ಕಾರ್ಬನ್ ಘಟಕದ ಕನ್‌ಸಲ್ಟೆಂಟ್ ಇವರ ಒಂದು ಸಮಿತಿಯು ಅರಸೀಕೆರೆಯಲ್ಲಿ ಸೇರಿ ಸಂದರ್ಶನ ನಡೆಸಿ ಕೆಲಸಕ್ಕೆ ತೆಗೆದುಕೊಳ್ಳಲಾಯಿತು.

ಈ) ನಿರ್ದಿಷ್ಟವಾದ ನೇಮಕಾತಿಗಳನ್ನು ಮಾಡಿರದೆ ಇರುವುದರಿಂದ ಹಾಗೂ ದಿನಗೂಲಿಯಲ್ಲಿ ಕೆಲಸಕ್ಕೆ ತೆಗೆದುಕೊಂಡಿರುವ ಕೆಲಸಗಾರರು ಈಗ ಕೆಲಸದಲ್ಲಿ ಇಲ್ಲದೆ ಇರುವುದರಿಂದ ಯಾವ ಕ್ರಮವೂ ಕೈಗೊಂಡಿರುವುದಿಲ್ಲ,

ಶ್ರೀ ಜಿ. ಎಸ್. ಬಸವರಾಜು.— ಸ್ವಾಮಿ, ಈ ಪ್ರಶ್ನೆಯು (ಅ)ಗೆ ಉತ್ತರವಾಗಿ ಅರಸೀಕೆರೆಯಲ್ಲಿ ಕಾರ್ಬನ್ ಕಾರ್ಖಾನೆಯನ್ನು ಕರ್ನಾಟಕ ರಾಜ್ಯದ ಕೇಂದ್ರ ತೆಂಗಿನ ನಾರಿನ ಮಾರಾಟ ಸಹಕಾರ ಸಂಘ ನಿಯಮಿತ ಇದರ ಮುಖಾಂತರ ಸ್ಥಾಪಿಸಲು ಕರ್ನಾಟಕ ರಾಜ್ಯ ಸರ್ಕಾರದಿಂದ 38,14,000 ರೂ ಬಂಡವಾಳ ಕೊಟ್ಟಿರುತ್ತೇವೆಂದು ಹೇಳಿದ್ದೀರಿ. ಮೊನ್ನೆತಾನೇ ನಾನು ಇದೇ ಕಾರ್ಖಾನೆಯ ಲೇಬರರ್ಸ್ ಬಗ್ಗೆ ಒಂದು ಕಾಲಿಂಗ್ ಅಟೆನ್‌ಷನ್ ಕಳುಹಿಸಿದ್ದೆ. ಅದರಲ್ಲಿ ಇದಕ್ಕೆ ಎನ್.ಸಿ.ಡಿ.ಸಿ.ಯವರು 59 ಲಕ್ಷ ಕೊಟ್ಟಿದ್ದಾರೆ ಎಂದು ಹೇಳಿದ್ದೀರಿ. ಇದರಲ್ಲಿ ನಾನು ಯಾವುದನ್ನು ನಂಬಲಿ ?

ಎರಡನೆಯದಾಗಿ ಈ ಕಾರ್ಬನ್ ಕಾರ್ಖಾನೆ ಇನ್ನೂ ಪೂರ್ಣಗೊಂಡಿರುವುದಿಲ್ಲ. ಉತ್ಪಾದನೆ ಇನ್ನೂ ಪ್ರಾರಂಭವಾಗದಿರುವುದರಿಂದ ಲಾಭಾಂಶದ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದೀರಿ. ಆದರೆ ಸುಮಾರು 4 ತಿಂಗಳ ಹಿಂದೆ ಮಾನ್ಯ ಶ್ರೀ ದೇವೇಗೌಡರು ಮತ್ತು ಮಾನ್ಯ ಶ್ರೀ ಎಸ್. ಆರ್. ಬೊಮ್ಮಾಯಿ ಅವರು ಅಲ್ಲಿಗೆ ಹೋಗಿ ಈ ಕಾರ್ಖಾನೆಯನ್ನು ಓಪನ್ ಮಾಡಿದ್ದಾರೆ. ಆಮೇಲೆ ಅಸ್ಸಾಮಾಲಿ ಎನ್ನುವ ಟೆಕ್ನಿಕಲ್ ಅಸಿಸ್ಟೆಂಟ್ ಅವರ ನಡತೆಯಿಂದ ಮಿಸ್ ಮ್ಯಾನೇಜ್‌ಮೆಂಟ್ ಆಗಿದೆಯೆಂದು ತಿಳಿದುಬಂದಿದೆ ; ಇದರ ಬಗ್ಗೆ ಮಾನ್ಯ ಮಂತ್ರಿಯವರು ವಿವರಣೆ ಕೊಡಬೇಕು. ಕಾರ್ಬನ್ ಕಾರ್ಖಾನೆಗೆ ಬೇಕಾಗಿರತಕ್ಕ ಕಚ್ಚಾಮಾಲು ನಾರಿನಿಂದ ಬರತಕ್ಕ ಹೊಟ್ಟಿನಿಂದ. ಮಾನ್ಯ ಮಂತ್ರಿಯವರು ಪರೀಕ್ಷಾರ್ಥವಾಗಿ ಇಜ್ಜಲು ಎಂದು ಹೇಳಿದ್ದಾರೆ. ಇದರ ಬಗ್ಗೆ ನನಗೆ ಅನುಮಾನ ಇದೆ. ಕಾರ್ಬನ್ ಕಾರ್ಖಾನೆಯಲ್ಲಿ ಯಾವ ಮಾಲನ್ನು ಉತ್ಪತ್ತಿ ಮಾಡುತ್ತಾರೆಂಬುದನ್ನು ತಿಳಿಸಬೇಕು. ಕೆಲಸಗಾರರನ್ನು ತಾತ್ಕಾಲಿಕವಾಗಿ ಕೆಲಸಕ್ಕೆ ತೆಗೆದುಕೊಳ್ಳಲಾಗಿದೆಯೆಂದು ತಿಳಿಸಿದ್ದಾರೆ ; ಕಾರ್ಮಿಕರು ಕೆಲಸಕ್ಕೆ ಸೇರುವಾಗ 3–4 ಸಾವಿರ ರೂಪಾಯಿ ಲಂಚಕೊಟ್ಟು ಸೇರಿಕೊಂಡಿದ್ದಾರೆ ; ಇವತ್ತು ಕಾರ್ಖಾನೆ ಬಂದಾಗಿದೆ ; ಅಲ್ಲಿರತಕ್ಕ ಯಂತ್ರೋಪಕರಣಗಳನ್ನು ಕೊಂಡುಕೊಳ್ಳುವುದಕ್ಕೆ ಬೇರೆಯವರು ಪ್ರಯತ್ನ ಮಾಡುತ್ತಿದ್ದಾರೆ. ಇದರ ಬಗ್ಗೆ ಸಿ.ಬಿ ಐ.ನಿಂದ ತನಿಖೆ ಮಾಡಿಸುತ್ತೇವೆಂದು ತಾವು ಒಂದು ವಾರದ ಕೆಳಗೆ ಹೇಳಿದ್ದೀರಿ ; ಈಗ ವಿಚಾರಣೆ ಮಾಡಿಸುತ್ತೀರಾ ? ಇದರ ಬಗ್ಗೆ ನಿರ್ದಿಷ್ಟವಾಗಿ ಉತ್ತರ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಮಾನ್ಯ ಅಧ್ಯಕ್ಷರೇ, ಈ ಕಾರ್ಖಾನೆಗೆ ರಾಜ್ಯ ಸರ್ಕಾರ ತೊಡಗಿಸಿರುವಂಥ ಬಂಡವಾಳ 38 ಲಕ್ಷದ 16 ಸಾವಿರ ರೂಪಾಯಿಗಳು. ಈಗ 61 ಲಕ್ಷದ 85 ಸಾವಿರ ರೂಪಾಯಿಗಳನ್ನು ಹೆಚ್ಚಿಗೆ ಕೇಳಿದ್ದಾರೆ. ಹೆಚ್ಚಿನ ಬೇಡಿಕೆ ಬಂದಿದ್ದರಿಂದ ಕೇಂದ್ರ ಸರ್ಕಾರಕ್ಕೆ ಅವರ ಮನವಿಯನ್ನು ಕಳುಹಿಸಿದ್ದೇವೆ. ಕೈಗಾರಿಕೆ ನಡೆಸತಕ್ಕ ಟೆಕ್ನಿಕಲ್ ಡೈರೆಕ್ಟರ್ ಬಗ್ಗೆ ದೂರು ಹೇಳಿದ್ದಾರೆ; ಈ ಕಾರ್ಖಾನೆಯ ಮಿಷನರಿಗಳನ್ನು ಬೇರೆಯವರಿಗೆ ಮಾರಾಟ ಮಾಡುವುದರ ಬಗ್ಗೆ ದೂರು ಹೇಳಿದ್ದಾರೆ; ಇದರ ಬಗ್ಗೆ ಇಲಾಖೆಯ ಅಧಿಕಾರಿಗಳು ತನಿಖೆ ಮಾಡಿದ್ದಾರೆ ; ಇವತ್ತು ನಾಳೆ ರಿಪೋರ್ಟು ಕೈಸೇರಲಿದೆ ; ತಪ್ಪು ಮಾಡಿದವರ ಮೇಲೆ ಉಗ್ರ ಕ್ರಮಗಳನ್ನು ಕೈಗೊಳ್ಳುತ್ತೇನೆ. ಯಾವುದೇ ಮಿಷನರಿ ಹೊರಗಡೆ ಹೋಗದಂತೆ ವ್ಯವಸ್ಥೆ ಮಾಡುವುದರ ಜೊತೆಗೆ ಕಾರ್ಖಾನೆ ಅಲ್ಲಿಯೇ ಉಳಿಯುವುದಕ್ಕೆ ಸೂಕ್ತ ವಿಚಾರಿಸು ಮಾಡುತ್ತೇನೆ.

ಶ್ರೀ ಜಿ. ಎಸ್. ಬಸವರಾಜು.— ಸುಮಾರು 60 ಜನ ಕಾರ್ಮಿಕರು ನಿರುದ್ಯೋಗಿಗಳಾಗಿದ್ದಾರೆ. ಈ ಫ್ಯಾಕ್ಟರಿಗೆ ಸೇರಬೇಕಾದರೆ ಮ್ಯಾನೇಜ್‌ಮೆಂಟಿನವರಿಗೆ 3–4 ಸಾವಿರ ರೂಪಾಯಿ ಲಂಚಕೊಟ್ಟು ಸೇರಿಕೊಂಡಿದ್ದಾರೆ ; ಇವರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.— ದಿನಗೂಲಿ ಆಧಾರದ ಮೇಲೆ ಮ್ಯಾನೇಜ್‌ಮೆಂಟಿನವರು ಕೆಲಸಕ್ಕೆ ತೆಗೆದುಕೊಂಡಿದ್ದಾರೆ, ಕಾರ್ಖಾನೆ ಮತ್ತೆ ಪ್ರಾರಂಭವಾದಾಗ ಇವರನ್ನು ಆದ್ಯತೆ ಮೇಲೆ ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೇನೆ.

ಮಾನ್ಯ ಸದಸ್ಯರು.— ಈ ಕಾರ್ಖಾನೆಗೆ ಕಚ್ಚಾಮಾಲು ಚಿಪ್ಪೋ ಅಥವಾ ನಾರೋ ?

ಶ್ರೀ ಎಸ್. ಆರ್. ಬೊಮ್ಮಾಯಿ.— ಚಿಪ್ಪು.

ವಿಷಯ : ಬಿಚ್ಚಾಲಿ ಗ್ರಾಮದ ಕಾರ್ಡ್‌ಬೋರ್ಡ್ ಫ್ಯಾಕ್ಟರಿ ಕುರಿತು.

ಪ್ರ. ಸಂಖ್ಯೆ 723 (1757) ಶ್ರೀ ಸುಧೀಂದ್ರರಾವ್ ಕಸಬೆ (ಕಲಮಲ).— ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಯಚೂರು ತಾಲ್ಲೂಕು ಬಿಚ್ಚಾಲಿ ಗ್ರಾಮದಲ್ಲಿ 'ಕಾರ್ಡ್‌ಬೋರ್ಡ್' ಕಾರ್ಖಾನೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

ಆ) ಸರ್ಕಾರದವರು ಈ ಕಾರ್ಖಾನೆಗೆ ನೀಡಿದ ಸಾಲ ಹಾಗೂ ಸಹಾಯ ಧನದ ಮೊತ್ತ ಎಷ್ಟು ;

ಇ) ಕಾರ್ಖಾನೆ ಈಗ ಕೆಲಸ ಮಾಡದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ; ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು ;

ಈ) ಈ ಕಾರ್ಡ್‌ಬೋರ್ಡ್ ಕಾರ್ಖಾನೆ ಇಲ್ಲಿಯವರೆಗೆ ಅನುಭವಿಸಿರುವ ನಷ್ಟ ಎಷ್ಟು ; ಮತ್ತು ಅದಕ್ಕೆ ಜವಾಬ್ದಾರರು ಯಾರು ;

ಉ) ಸರ್ಕಾರದವರು ತಪ್ಪಿತಸ್ಥ ಪದಾಧಿಕಾರಿಗಳ ಮೇಲೆ (ಹಿಂದಿನ ಮತ್ತು ಈಗಿನ) ಕ್ರಮ ತೆಗೆದುಕೊಳ್ಳಲು ಉದ್ದೇಶಿಸಿದ್ದಾರೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು).—

ಅ) ಬಂದಿದೆ.

ಆ) ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯವರು 30 ಲಕ್ಷ ರೂ.ಗಳನ್ನು ಮತ್ತು ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಮತ್ತು ಅಭಿವೃದ್ಧಿ ನಿಗಮದವರು 8.48 ಲಕ್ಷ ರೂಗಳನ್ನು ದೀರ್ಘಾವಧಿ ಸಾಲವಾಗಿ ನೀಡಿದ್ದಾರೆ, ಮತ್ತು ಕೈಗಾರಿಕಾ ಇಲಾಖೆಯಿಂದ 7.00 ಲಕ್ಷ ರೂಗಳನ್ನು ಅಭಿವೃದ್ಧಿ ಬಂಡವಾಳ ಸಾಲವಾಗಿ ಕೊಡಲಾಗಿದೆ. ಈ ಕಾರ್ಖಾನೆಗೆ ಕೇಂದ್ರ ಸಹಾಯಧನವಾಗಿ 8,50,270-00 ರೂ. ಗಳನ್ನು ಸಹ ಮಂಜೂರು ಮಾಡಲಾಗಿದೆ ಮತ್ತು 2.00 ಲಕ್ಷ ರೂಗಳನ್ನು ಮೂಲಧನವಾಗಿ (ಷೇರ್ ಕ್ಯಾಪಿಟಲ್) ಆಗಿ ಕೊಡಲಾಗಿದೆ.

ಇ) ಹೌದು ಪರಿಶೀಲನೆಯಲ್ಲಿದೆ.

ಈ) ಈ ಕಾರ್ಡ್‌ಬೋರ್ಡ್ ಕಾರ್ಖಾನೆ 30-6-83ರಂತೆ ಒಟ್ಟು 23.00 ಲಕ್ಷರೂ. ನಷ್ಟವನ್ನು ಅನುಭವಿಸಿದೆ ಮತ್ತು ಕಾರ್ಖಾನೆ ನಷ್ಟದಲ್ಲಿ ನಡೆಯಲು ಈ ಕಂಪನಿಯ ಸಂಚಾಲಕ ಮಂಡಳಿಯವರ ಕಾರಣವಾಗಿರುತ್ತಾರೆ.

ಉ) ಈಗ ಕಾರ್ಖಾನೆಯ ಕೆಲಸ ನಿಂತಿದೆ. ಕಾರ್ಖಾನೆಯ ಕೆಲಸವನ್ನು ಪ್ರಾರಂಭಿಸಿದ್ದಾರೆ. ಸಂಚಾಲಕ ಮಂಡಳಿಯನ್ನು ಅಗತ್ಯವಾದರೆ ಪುನರ್ ರಚಿಸಲಾಗುವುದು.

ಶ್ರೀ ಸುಧೀಂದ್ರರಾವ್ ಕಸಬೆ.— ಸ್ವಾಮಿ, ಈ ಕಾರ್ಖಾನೆಗೆ ಸರ್ಕಾರ ಕೊಟ್ಟಿರತಕ್ಕ ಲಕ್ಷಾಂತರ ರೂಪಾಯಿಗಳ ಜೊತೆಗೆ ರಾಷ್ಟ್ರೀಕೃತ ಬ್ಯಾಂಕುಗಳಿಂದಲೂ ಲಕ್ಷಾಂತರ ರೂಪಾಯಿಗಳನ್ನು ಪಡೆದುಕೊಂಡು ಅಲ್ಲಿ ಕೆಲಸ ಮಾಡುತ್ತಿದ್ದಂಥ ನೌಕರರಿಗೆ ಸಂಬಳ ಕೊಡದೇ, ಕಂಪನಿಯ ವ್ಯವಸ್ಥಾಪಕರು ಯಂತ್ರೋಪಕರಣಗಳನ್ನು ಮಾರಾಟ ಮಾಡಿಕೊಳ್ಳುತ್ತಿದ್ದಾರೆ. ಇದರ ಬಗ್ಗೆ ಸಿ.ಬಿ.ಡಿ. ತನಿಖೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಮಾನ್ಯ ಅಧ್ಯಕ್ಷರೇ, ಈ ಒಂದು ಕಂಪನಿಯಲ್ಲಿ ನಡೆದ ವ್ಯವಹಾರಗಳ ಬಗ್ಗೆ ಸರ್ಕಾರ ತನಿಖೆ ನಡೆಸುತ್ತಿದೆ. ಮುಂದೆ ಏನು ಕ್ರಮ ತೆಗೆದುಕೊಳ್ಳಬೇಕೆಂಬ ಬಗ್ಗೆ ಸರ್ಕಾರ ಆಲೋಚನೆ ಮಾಡುತ್ತಿದೆ. ಇದರ ಜೊತೆಗೆ ಮ್ಯಾನೇಜ್‌ಮೆಂಟ್ ಬದಲಾವಣೆ ಮಾಡಿ ; ಪುನರ್ ವ್ಯವಸ್ಥೆ ಮಾಡುವುದು ಸರ್ಕಾರದ ಆಲೋಚನೆಯಲ್ಲಿದೆ.